**ದಿನಾಂಕಃ 07.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಸಹಿ ನನ್ನದೇ ಇರುತ್ತದೆ.

**ಮುಂದುವರೆದ ಮುಖ್ಯ ವಿಚಾರಣೆ : ಪ್ರತಿವಾದಿಯ ಪರ ವಕೀಲರಿಂದಃ**

1. ಒಂದನೇ ಪ್ರತಿವಾದಿ ನೀಡಿದ ಜಿ.ಪಿ.ಎ. ಯನ್ನು ನಿಡಿ **9** ಎಂದು, ಮರಣ ಪ್ರಮಾಣ ಪತ್ರವನ್ನು ನಿಡಿ **10** ಎಂದು, ಮ್ಯುಟೇಶನ್ ರಿಜಿಸ್ಟರ್ ನ್ನು ನಿಡಿ **11, ಸರ್ವೇ ನಂ. 235 ಎ/3** ರ ವಿವಿಧ ಸಾಲಿನ ಪಹಣಿಗಳನ್ನು ಒಟ್ಟಾಗಿ ನಿಡಿ **12** ಎಂದು, ದೃಢೀಕೃತ ಕ್ರಯಪತ್ರವನ್ನು ನಿಡಿ **13** ಎಂದು, ರುಣಭಾರ ಪ್ರಮಾಣ ಪತ್ರವನ್ನು ನಿಡಿ **14** ಎಂದು, ಹೂವಿನಹಡಗಲಿ ಪುರಸಭೆಯವರು ನೀಡಿದ ಖಾತಾ ಎಕ್ಸ್ಟ್ರ್ಯಾಕ್ಟ್ ಗಳನ್ನು ನಿಡಿ **15** ಎಂದು, ಆಧಾರ್ ಕಾರ್ಡ್ ನ್ನು ನಿಡಿ **16** ಎಂದು, ಬ್ಯಾಂಕ್ ಪಾಸ್ ಬುಕ್ ನ್ನು ನಿಡಿ **17** ಎಂದು, ಬ್ಯಾಂಕ್ ಚಲನ್ ನ್ನು ನಿಡಿ **18** ಎಂದು, ಲೋನ್ ಪಾಸ್ ಬುಕ್ ನ್ನು ನಿಡಿ **19** ಎಂದು, ಬ್ಯಾಂಕ್ ಖಾತೆಯ ವಿವರಗಳನ್ನು ನಿಡಿ **20** ಎಂದು, ವೈದ್ಯಕೀಯ ದಾಖಲೆಗಳನ್ನು ನಿಡಿ **21** ರಿಂದ ನಿಡಿ **23** ಎಂದು ಗುರುತಿಸಿತು.

***(ನೋಂದಣಿಯಾಗದ ಪಾಲುವಿಭಾಗ ಪತ್ರ ಮತ್ತು ನೋಂದಾಯಿತ ವಿಲ್ ಹಾಜರು ಮಾಡಿದ್ದು, ವಿಲ್ ದಾಖಲೆಯನ್ನು ಪತ್ರ ಬರಹಗಾರರು ಅಥವಾ ಸಾಕ್ಷಿ ಸಹಿ ಮಾಡಿದವರ ಮೂಲಕ ಗುರುತಿಸಿಕೊಳ್ಳುವಂತೆ ಮತ್ತು ಸ್ಟಾಂಪ್ ಶುಲ್ಕ ದಂಡ ಪಾವತಿಸಿ ಪಾಲುವಿಭಾಗ ಪತ್ರವನ್ನು ಗುರುತಿಸಿಕೊಳ್ಳುವಂತೆ ಸೂಚಿಸಿ ಮುಂದೂಡಿದೆ).***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**